

بسم اللهِ الرّحمٰنِ الرّحیم

# ಹಝ್ರತ್ ಪೈಗಂಬರ್(ಸ)ರ ಅದ್ವಿತೀಯ ಕೃತಜ್ಞತಾ ಭಾವ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **07–08–2026** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ.

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ. بِسْمِ اللّٰهِ الرَّحْمٰنِ الرَّحِيمِ.

اَلْحَمْدُ لِلّٰهِ رَبِّ الْعَالَمِينَ. اَلرَّحْمٰنِ الرَّحِيمِ. مٰلِكِ يَوْمِ الدِّينِ. إِيَّاكَ نَعْبُدُ وَإِيَّاكَ نَسْتَعِينُ.

اِهْدِنَا الصِّرَاطَ الْمُسْتَقِيمَ. صِرَاطَ الَّذِينَ أَنْعَمْتَ عَلَيْهِمْ غَيْرِ الْمَغْضُوبِ عَلَيْهِمْ وَلَا الضَّالِّينَ.

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಹಝ್ರತ್ ಪೈಗಂಬರ್(ಸ)ರ ಕೃತಜ್ಞತೆಯ ಗುಣಮಟ್ಟ, ಅವರ ಕಾರ್ಯಗಳು ಮತ್ತು ಉಪದೇಶಗಳ ಕುರಿತು ಜಲ್ಸಗೂ ಮುನ್ನ ನಾನು ಪ್ರಸ್ತಾಪಿಸಿದ್ದೆ. ಅದೇ ಹಿನ್ನೆಲೆಯಲ್ಲಿ ಇಂದು ಸಹ ವಿವರಿಸಲಿದ್ದೇನೆ. ಅಲ್ಲಾಹನ ಕೃತಜ್ಞತೆಯತ್ತ ಗಮನ ಸೆಳೆಯುತ್ತಾ, ಸಣ್ಣ ಸಣ್ಣ ವಿಷಯಗಳಿಗೂ ಕೃತಜ್ಞತೆ ಸಲ್ಲಿಸಲು ನಬಿ(ಸ) ಮಾರ್ಗದರ್ಶನ ನೀಡಿದರು. ಹಝ್ರತ್ ಅನಸ್ ಬಿನ್ ಮಾಲಿಕ್(ರ) ವರದಿ ಮಾಡುತ್ತಾರೆ, ರಸೂಲುಲ್ಲಾಹ್(ಸ) ಹೇಳಿದರು: 'ಒಂದು ತುತ್ತು ತಿನ್ನುವಾಗ ಅಥವಾ ಒಂದು ಗುಟುಕು ಕುಡಿಯುವಾಗ ದೇವನಿಗೆ ಪ್ರಶಂಸೆ ಸಲ್ಲಿಸುವ ದಾಸನ ಕಾರ್ಯಕ್ಕೆ ಅಲ್ಲಾಹನು ಪ್ರಸನ್ನನಾಗುತ್ತಾನೆ.'

ಹಝ್ರತ್ ಆಯಿಶ(ರ) ವಿವರಿಸುತ್ತಾರೆ: ಒಂದು ದಿನ ಹಝ್ರತ್ ಪೈಗಂಬರ್(ಸ) ಮನೆಗೆ ಪ್ರವೇಶಿಸಿದಾಗ ರೊಟ್ಟಿಯ ಒಂದು ತುಂಡು ಬಿದ್ದಿರುವುದನ್ನು ಕಂಡರು, ನಬಿ(ಸ) ಆ ರೊಟ್ಟಿಯ ತುಂಡನ್ನು ಎತ್ತಿ, ಸ್ವಚ್ಛಗೊಳಿಸಿ ಅದನ್ನು ತಿಂದರು. ಅನಂತರ ಹೀಗೆ ಹೇಳಿದರು: 'ಹೇ ಆಯಿಶಾ, ಗೌರವಾರ್ಹ ವಸ್ತುವನ್ನು ಗೌರವಿಸು. ಈ ಆಹಾರದ ಅನುಗ್ರಹವು ಯಾವುದಾದರೂ ಸಮುದಾಯದಿಂದ ಹೊರಟುಹೋದ ನಂತರ ಅವರಿಗೆ ಅದು ಮರಳಿ ಸಿಗುವುದಿಲ್ಲ.' ಇದಾಗಿತ್ತು ನಬಿ(ಸ)ರ ರೀತಿ. ನಮಗೂ ಆಹಾರದಲ್ಲಿ ಸಮೃದ್ಧಿ (ಬರ್ಕತ್) ಬೇಕೆಂಬ ಬಯಕೆಯಿದ್ದರೆ, ಅಲ್ಲಾಹನ ಪ್ರತಿಯೊಂದು ಸಣ್ಣ ಸಣ್ಣ ವಸ್ತುವಿಗೂ ನಾವು ಅವನಿಗೆ ಕೃತಜ್ಞತೆ ಸಲ್ಲಿಸಬೇಕು.

ಹಝ್ರತ್ ಇಬ್ನು ಅಬ್ಬಾಸ್(ರ) ವಿವರಿಸುತ್ತಾರೆ: ಮಕ್ಕಾ ವಿಜಯದ ದಿನದಂದು ನಬಿ(ಸ) ಹಝ್ರತ್ ಉಮ್ಮು ಹಾನಿ(ರ)ರ ಮನೆಗೆ ತೆರಳಿದರು, ನಬಿ(ಸ)ರಿಗೆ ಹಸಿವಾಗಿತ್ತು. ನಬಿ(ಸ) ಹೀಗೆ ವಿಚಾರಿಸಿದರು: 'ಮನೆಯಲ್ಲಿ ತಿನ್ನಲು ಏನಾದರೂ ಇದೆಯೇ?' ಹಝ್ರತ್ ಉಮ್ಮು ಹಾನಿ(ರ) ಹೇಳಿದರು: 'ಒಣಗಿದ ರೊಟ್ಟಿಯ ತುಂಡುಗಳನ್ನು ಹೊರತುಪಡಿಸಿ ನನ್ನ ಬಳಿ ಬೇರೇನೂ ಇಲ್ಲ. ಅದನ್ನು ನಿಮಗೆ ನೀಡಲು ನನಗೆ ನಾಚಿಕೆಯಾಗುತ್ತಿದೆ.' 'ಅದನ್ನೇ ತನ್ನಿ' ಎಂದು ನಬಿ(ಸ) ಹೇಳಿದರು. ಅನಂತರ ನಬಿ(ಸ) ರೊಟ್ಟಿಯ ಒಣಗಿದ ತುಂಡುಗಳನ್ನು ನೀರಿನಲ್ಲಿ ಹಾಕಿ ಮೃದುಗೊಳಿಸಿದರು. ಉಮ್ಮು ಹಾನಿ(ರ) ಉಪ್ಪನ್ನು ತಂದರು. 'ಯಾವುದಾದರೂ ಸಾರು ಇದೆಯೇ?' ಎಂದು ನಬಿ(ಸ) ಕೇಳಿದರು. 'ಸ್ವಲ್ಪ ಸಿರ್ಕ ಹೊರತುಪಡಿಸಿ ಬೇರೇನೂ ಇಲ್ಲ' ಎಂದು ಉಮ್ಮು ಹಾನಿ(ರ) ಹೇಳಿದರು. 'ಅದನ್ನೇ ತನ್ನಿ' ಎಂದು ನಬಿ(ಸ) ಹೇಳಿದರು. ನಬಿ(ಸ) ಅದನ್ನು ರೊಟ್ಟಿಯ ಮೇಲೆ ಸುರಿದು ಅಲ್ಲಾಹನನ್ನು ಸ್ತುತಿಸಿದರು ಮತ್ತು ಹೀಗೆ ಹೇಳಿದರು: 'ಸಿರ್ಕ (ವಿನೆಗರ್) ಎಂತಹ ಶ್ರೇಷ್ಠ ಪದಾರ್ಥ ಆಗಿದೆ! ಯಾವ ಮನೆಯಲ್ಲಿ ಸಿರ್ಕ ಇದೆಯೋ ಅದು ಬಡವರ ಮನೆಯಲ್ಲ.'

(ಹುಝೂರ್ ಹೇಳಿದರು:) ಇವಾಗಿದ್ದವು ಹಝ್ರತ್ ಪೈಗಂಬರ್(ಸ)ರ ಕೃತಜ್ಞತೆಯ ಮಟ್ಟ. ನಾವು ಈ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ವಾಸಿಸುತ್ತೇವೆ ಮತ್ತು ಅಲ್ಲಾಹನ ಅಸಂಖ್ಯಾತ ಅನುಗ್ರಹಗಳ ಪ್ರಯೋಜನವನ್ನು ಪಡೆಯುತ್ತೇವೆ, ಹಾಗಿದ್ದೂ ಅವನ ಕೃತಜ್ಞತೆಯ ಹಕ್ಕನ್ನು ಪೂರೈಸುವುದಿಲ್ಲ.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ನಿಮ್ಮ ದೇಹದ ಮೇಲೆ ಎಂದಾದರೂ ಹರಿದ ಬಟ್ಟೆಯಿದ್ದರೆ ನೀವು ಅಳಲಾರಂಭಿಸುತ್ತೀರಿ ಮತ್ತು 'ಧರಿಸಲು ಹರಿದ ಬಟ್ಟೆ ಸಿಕ್ಕಿದೆ, ನಮ್ಮ ಅದೃಷ್ಟ ಎಷ್ಟು ಕೆಟ್ಟದು' ಎಂದು ಹೇಳುತ್ತೀರಿ. ಆದರೆ ಸಹಾಬಿಯರಿಗೆ ಹರಿದ ಬಟ್ಟೆ ಸಿಗುವಾಗ ಅವರ ತಲೆಯು ಅಲ್ಲಾಹನ ಸನ್ನಿಧಿಯಲ್ಲಿ ಬಾಗುತ್ತಿತ್ತು... 'ನಮ್ಮ ದೇವನು ನಮಗೆ ನೀಡಿದ ಈ ಬಟ್ಟೆ ಎಷ್ಟೊಂದು ಚೆನ್ನಾಗಿದೆ' ಎಂದು ಹೇಳುತ್ತಿದ್ದರು. ಅವರಿಗೆ ನಾಲ್ಕು ದಿನಗಳ ನಂತರ ಒಣಗಿದ ರೊಟ್ಟಿಯ ಒಂದು ತುಂಡು ಸಿಕ್ಕರೂ ಸಂತೋಷದಿಂದ ಅವರ ಕಣ್ಣುಗಳಲ್ಲಿ ಹೊಳಪು ಮೂಡುತ್ತಿತ್ತು ಮತ್ತು ಅವರು 'ಅಲ್‌ಹಮ್ದುಲಿಲ್ಲಾಹ್' (ಅಲ್ಲಾಹನಿಗೆ ಎಲ್ಲ ಸ್ತುತಿಗಳು) ಎಂದು ಹೇಳುತ್ತಿದ್ದರು.

ಹಝ್ರತ್ ಮುಸ್ಲಿಹ್ ಮೌಊದ್(ರ) ಜಮಾಅತಿನ ಸದಸ್ಯರನ್ನು ಉದ್ದೇಶಿಸಿ ಹೇಳುತ್ತಾರೆ: ದೇವನು ನಿಮ್ಮನ್ನು ಯಾವ ಉದ್ದೇಶಕ್ಕಾಗಿ ಸೃಷ್ಟಿಸಿದ್ದಾನೆ ಎಂಬ ಅರಿವು ನಿಮಗುಂಟಾಗುವ ವರೆಗೂ ನೀವು ಹೇಗೆ ಕೆಲಸ ಮಾಡಬಲ್ಲಿರಿ? ದೇವನು ನಿಮ್ಮನ್ನು ಎಂತಹ ಸ್ಥಿತಿಯಲ್ಲಿ ತಂದು ನಿಲ್ಲಿಸಿದ್ದಾನೆಂದರೆ, ನಿಮ್ಮ ಹೃದಯವು ಸದಾ ಸಂತೋಷದ ಅಲೆಗಳಿಂದ ತುಂಬಿರಬೇಕು ಮತ್ತು ನಿಮ್ಮಲ್ಲಿ

ಸದಾ ಜಾಗರೂಕತೆ ಹಾಗೂ ಚುರುಕುತನ ಗೋಚರಿಸಬೇಕು. ಈ ಸ್ಥಿತಿ ನಿಮ್ಮಲ್ಲಿ ಉಂಟಾದರೆ, ಅತ್ಯಂತ ಅಲ್ಪ ಆಹಾರ ಕೂಡ ನಿಮ್ಮನ್ನು ಕೆಲಸ ಮಾಡಲು ಯೋಗ್ಯರನ್ನಾಗಿ ಮಾಡುವಂತಹ ಶಕ್ತಿಯು ತಕ್ಷಣವೇ ಜಾಗೃತಗೊಳ್ಳುವುದು.

(ಹುಝೂರ್ ಹೇಳಿದರು:) ಸಾಮಾನ್ಯವಾಗಿ ಪ್ರತಿಯೊಬ್ಬ ಅಹ್ಮದಿಯು ಮತ್ತು ವಿಶೇಷವಾಗಿ ವಖ್‌ಫೇ ಝಿಂದಗಿ ಆದವರು ತಮ್ಮ ಕೃತಜ್ಞತೆಯ ಗುಣಮಟ್ಟವನ್ನು ಹೆಚ್ಚಿಸಿಕೊಳ್ಳಲು ಬಳಸಬೇಕಾದ ಉಪಾಯ ಇದಾಗಿದೆ. ಇದರ ಅಗತ್ಯ ಬಹಳಷ್ಟಿದೆ. ಅದೇ ರೀತಿ ತಮ್ಮ ಪತ್ನಿ ಮಕ್ಕಳಲ್ಲಿಯೂ ಈ ಗುಣವನ್ನು ಮೂಡಿಸುವ ಅಗತ್ಯವಿದೆ. ಏಕೆಂದರೆ ವಖ್‌ಫೇ ಝಿಂದಗಿಯವರು ಯಾವ ಉದ್ದೇಶಕ್ಕಾಗಿ ತಮ್ಮನ್ನು ತಾವು ಸಮರ್ಪಿಸಿಕೊಂಡಿದ್ದಾರೋ ಅದು ಬಹಳ ಭವ್ಯವಾದ ಉದ್ದೇಶವಾಗಿದೆ. ಭವ್ಯವಾದ ಉದ್ದೇಶವನ್ನು ಸಾಧಿಸಲು, ಭವ್ಯ ಉದ್ದೇಶ ಸಾಧಿಸಿದವರ ಮಾದರಿಗಳು ಮುಂದೆ ಇರಬೇಕು.

ಹಝ್ರತ್ ಪೈಗಂಬರ್(ಸ) ನೀರು ಕುಡಿಯುವಾಗ ಪಾತ್ರೆಯನ್ನು ಬೇರ್ಪಡಿಸಿ ಮೂರು ಗುಟುಕುಗಳಲ್ಲಿ ನೀರು ಕುಡಿಯುತ್ತಿದ್ದರು, ಪ್ರತಿಯೊಂದು ಗುಟುಕಿನಲ್ಲೂ ಅಲ್ಲಾಹನ ಸ್ತುತಿ (ಹಮ್ದ್) ಮಾಡುತ್ತಿದ್ದರು ಮತ್ತು ಕೊನೆಯ ಗುಟುಕಿನಲ್ಲಿ ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸುತ್ತಿದ್ದರು.

(ಹುಝೂರ್ ಸಹೀಹ್ ಬುಖಾರಿಯಿಂದ ಹಝ್ರತ್ ಅಬೂ ಹುರೈರಾ(ರ)ರ ಒಂದು ವಿವರವಾದ ವರದಿಯನ್ನು ಪ್ರಸ್ತುತಪಡಿಸಿದರು; ಅದರಲ್ಲಿ ಅವರು ತೀವ್ರ ಹಸಿವಿನ ಸ್ಥಿತಿಯಲ್ಲಿ, ಯಾಚಿಸದವರ ಕಾಳಜಿ ವಹಿಸುವಂತೆ ಆದೇಶ ಇರುವ ಪವಿತ್ರ ಖುರ್‌ಆನಿನ ಆಯತಿನ ಅರ್ಥವನ್ನು ದಾರಿಯಲ್ಲಿ ಕುಳಿತು ಹಾದುಹೋಗುವವರಿಂದ ಕೇಳುತ್ತಿದ್ದರು.) ಹಝ್ರತ್ ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್(ರ)ರಿಂದ ಅಬೂ ಹುರೈರಾ(ರ) ಅರ್ಥವನ್ನು ಕೇಳಿದರು, ಆದರೆ ಅವರು ಹಝ್ರತ್ ಅಬೂ ಹುರೈರಾ(ರ)ರ ಸ್ಥಿತಿಯನ್ನು ಅರ್ಥಮಾಡಿಕೊಳ್ಳಲಿಲ್ಲ. ಆದರೆ ಅವರು ಹಝ್ರತ್ ಪೈಗಂಬರ್(ಸ)ರೊಡನೆ ಆ ವಚನದ ಅರ್ಥವನ್ನು ಕೇಳಿದಾಗ, ನಬಿ(ಸ) ಮುಗುಳ್ನಕ್ಕು, 'ನನ್ನ ಹಿಂದೆ ಬಾ' ಎಂದು ಹೇಳಿದರು. ಅನಂತರ ಅವರಿಗೆ ಹಝ್ರತ್ ಪೈಗಂಬರ್(ಸ) ಒಂದು ಹಾಲಿನ ಬಟ್ಟಲನ್ನು ನೀಡಿದರು ಮತ್ತು ಆ ಹಾಲಿನ ಬಟ್ಟಲಿನಿಂದ 'ಅಹ್ಲೇ ಸುಫ್ಫಾ'ದವರು ಸಹ ಹಾಲು ಕುಡಿದರು, ಆ ಸಣ್ಣ ಹಾಲಿನ ಬಟ್ಟಲಿನಲ್ಲಿ ಎಂತಹ ಸಮೃದ್ಧಿ (ಬರ್ಕತ್) ಉಂಟಾಯಿತೆಂದರೆ ಪ್ರತಿಯೊಬ್ಬರೂ ತೃಪ್ತಿಯಾಗುವ ವರೆಗೂ ಹಾಲು ಕುಡಿದರು, ಆದಾಗ್ಯೂ ಆ ಬಟ್ಟಲಿನಲ್ಲಿ ಹಾಲು ಉಳಿಯಿತು. ತದನಂತರ ಹಝ್ರತ್ ಪೈಗಂಬರ್(ಸ) ಆ ಹಾಲಿನ ಬಟ್ಟಲನ್ನು ತೆಗೆದುಕೊಂಡು, ಮೊದಲು ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸಿದರು, ಅನಂತರ ಆ ಉಳಿದ ಹಾಲನ್ನು ಕುಡಿದರು.

ಹಝ್ರತ್ ಪೈಗಂಬರ್(ಸ) ಯಾವಾಗಲೂ ತಮ್ಮ ಉಪಕಾರಿಗಳನ್ನು ನೆನಪಿನಲ್ಲಿಟ್ಟುಕೊಳ್ಳುತ್ತಿದ್ದರು ಮತ್ತು ಅವರನ್ನು ಅತ್ಯುತ್ತಮ ರೀತಿಯಲ್ಲಿ ಸ್ಮರಿಸುತ್ತಿದ್ದರು. ಉದಾಹರಣೆಗೆ, ಹಝ್ರತ್ ಖದೀಜಾ(ರ)ರನ್ನು ಸದಾ ಸ್ಮರಿಸುತ್ತಿದ್ದರು. ಅದೇ ರೀತಿ ಹಝ್ರತ್ ಅಬೂಬಕರ್(ರ)ರನ್ನೂ ಸದಾ ಅದೇ ರೀತಿಯಲ್ಲಿ ಸ್ಮರಿಸುತ್ತಿದ್ದರು.

ಮುಸ್ಲಿಮರ ಮೇಲೆ ದೌರ್ಜನ್ಯವೆಸಗಲಾದಾಗ ಅವರು ಅಬಿಸಿನಿಯಾಗೆ ವಲಸೆ ಹೋದರು ಮತ್ತು ಅಬಿಸಿನಿಯಾದ ನಜಾಶಿ ರಾಜ ಅವರಿಗೆ ಆಶ್ರಯ ನೀಡಿದನು. ರಸೂಲುಲ್ಲಾಹ್(ಸ) ಆ ರಾಜನ ಈ ಉಪಕಾರವನ್ನು ಸದಾ ನೆನಪಿನಲ್ಲಿಟ್ಟುಕೊಂಡಿದ್ದರು ಮತ್ತು ಪ್ರತಿಯೊಂದು ಸಂದರ್ಭದಲ್ಲೂ ಈ ಉಪಕಾರವನ್ನು ಸ್ಮರಿಸುತ್ತಿದ್ದರು.

ಖೈಬರ್ ಯುದ್ಧದ ನಂತರ ಮಾರ್ಗದಲ್ಲಿ ಹಝ್ರತ್ ಪೈಗಂಬರ್(ಸ)ರ ವಿವಾಹವು ಹಝ್ರತ್ ಸಫಿಯ್ಯಾ(ರ)ರೊಂದಿಗೆ ನೆರವೇರಿತು. ವಿವಾಹದ ರಾತ್ರಿಯಲ್ಲಿ ಹಝ್ರತ್ ಅಬೂ ಅಯ್ಯೂಬ್ ಖಾಲಿದ್ ಬಿನ್ ಝೈದ್(ರ) ರಾತ್ರಿಯಿಡೀ ನಬಿ(ಸ)ರ ಡೇರೆಯ ಹೊರಗೆ ಕಾವಲು ಕಾಯ್ದರು. ಮುಂಜಾನೆ ನಬಿ(ಸ) ಎಚ್ಚರಗೊಂಡು ಅವರು ಕಾವಲು ಕಾಯುತ್ತಿರುವುದನ್ನು ಕಂಡಾಗ, ಅವರ ನಿಷ್ಠೆಯನ್ನು ನೋಡಿ ಅವರಿಗಾಗಿ ಹೀಗೆ ಪ್ರಾರ್ಥಿಸಿದರು: 'ಹೇ ಅಲ್ಲಾಹ್, ಅಬೂ ಅಯ್ಯೂಬ್ ರಾತ್ರಿಯಿಡೀ ನನ್ನನ್ನು ಹೇಗೆ ಸಂರಕ್ಷಿಸಿದನೋ, ಅದೇ ರೀತಿ ನೀನು ಅವನನ್ನು ಸಂರಕ್ಷಿಸು.'

ಹಝ್ರತ್ ಅಮ್ರ್ ಬಿನ್ ಅಖ್ತಬ್(ರ) ವಿವರಿಸುತ್ತಾರೆ: ಒಮ್ಮೆ ಹಝ್ರತ್ ಪೈಗಂಬರ್(ಸ) ನೀರನ್ನು ಕೇಳಿದರು. ನಾನು ನಬಿ(ಸ)ರಿಗಾಗಿ ನೀರನ್ನು ತಂದೆ, ಅದರಲ್ಲಿ ಒಂದು ಕೂದಲಿತ್ತು, ನಾನು ಆ ಕೂದಲನ್ನು ತೆಗೆದುಹಾಕಿದೆ. ನಬಿ(ಸ) ನನಗಾಗಿ ಹೀಗೆ ದುಆ ಮಾಡಿದರು: 'ಹೇ ಅಲ್ಲಾಹ್, ಇವನನ್ನು ಸುಂದರನನ್ನಾಗಿ ಮಾಡು.'

ಹಝ್ರತ್ ಅನಸ್(ರ)ರಿಗಾಗಿ ನಬಿ(ಸ) ಸಂಪತ್ತು ಮತ್ತು ಸಂತತಿಯಲ್ಲಿ ಸಮೃದ್ಧಿಗಾಗಿ ಪ್ರಾರ್ಥಿಸಿದರು; ಹಝ್ರತ್ ಅನಸ್(ರ) ಹೇಳುತ್ತಾರೆ: 'ನನ್ನ ಸಂಪತ್ತು ಬಹಳ ಹೆಚ್ಚಾಗಿದೆ ಮತ್ತು ನನ್ನ ಮಕ್ಕಳು ಹಾಗೂ ಮೊಮ್ಮಕ್ಕಳ ಸಂಖ್ಯೆ ಇಂದು ನೂರರಷ್ಟಿದೆ.'

ನಬಿ(ಸ) ಉಪದೇಶಿಸುತ್ತಾ ಹೇಳಿದರು: 'ಯಾರೊಂದಿಗಾದರೂ ಉಪಕಾರ ಮಾಡಲ್ಪಟ್ಟು ಅವನು ಅದನ್ನು ಸ್ಮರಿಸಿದರೆ, ಅವನು ಅದರ ಹಕ್ಕನ್ನು ಪೂರೈಸಿದನು; ಯಾರು ಅದನ್ನು ಮುಚ್ಚಿಟ್ಟನೋ, ಅವನು ಕೃತಘ್ನತೆಯನ್ನು ತೋರಿದನು.'

ಹಝ್ರತ್ ಪೈಗಂಬರ್(ಸ) ಉಡುಗೊರೆಯನ್ನು ಸ್ವೀಕರಿಸುತ್ತಿದ್ದರು ಮತ್ತು ಅದಕ್ಕೆ ಪ್ರತಿಯಾಗಿ ನೀಡುತ್ತಿದ್ದರು. ನಬಿ(ಸ) ಹೇಳಿದರು: 'ಯಾರಿಗಾದರೂ ಉಡುಗೊರೆ ನೀಡಲ್ಪಡುವಾಗ, ಅವನಿಗೆ ಸಾಮರ್ಥ್ಯವಿದ್ದರೆ ಉಡುಗೊರೆಗೆ ಪ್ರತಿಯಾಗಿ ಏನನ್ನಾದರೂ ನೀಡಲಿ, ಸಾಮರ್ಥ್ಯವಿಲ್ಲದಿದ್ದರೆ ಉಡುಗೊರೆ ನೀಡಿದವನನ್ನು ಪ್ರಶಂಸಿಸಲಿ.'

ಹಝ್ರತ್ ಪೈಗಂಬರ್(ಸ) ರಾತ್ರಿ ನಮಾಝ್‌ನಲ್ಲಿ ಎಷ್ಟು ಸಮಯ ನಿಲ್ಲುತ್ತಿದ್ದರೆಂದರೆ ಅವರ ಪಾದಗಳು ಬೀಗುತ್ತಿದ್ದವು. ಇದನ್ನು ಕಂಡು ಹಝ್ರತ್ ಆಯಿಶ(ರ) ಹೀಗೆ ಕೇಳಿದರು: 'ಯಾ ರಸೂಲಲ್ಲಾಹ್(ಸ), ಅಲ್ಲಾಹನು ನಿಮ್ಮನ್ನು ಮೊದಲಿನ ಮತ್ತು ನಂತರದ ಎಲ್ಲ ಪಾಪಗಳಿಂದ ರಕ್ಷಿಸಿರುವಾಗ ನೀವೇಕೆ ಹೀಗೆ ಮಾಡುತ್ತೀರಿ?'. ನಬಿ(ಸ) ಹೇಳಿದರು: 'ಕೃತಜ್ಞತೆ ತೋರಿಸುವ ದಾಸನಾಗಲು ನಾನು ಬಯಸಬೇಡವೇ?'

ಹಝ್ರತ್ ಪೈಗಂಬರ್(ಸ) ನಮಾಝ್‌ಗಳಲ್ಲಿ ಎಷ್ಟೊಂದು ಅಳುತ್ತಿದ್ದರೆಂದರೆ ಮತ್ತು ನಿಲ್ಲುತ್ತಿದ್ದರೆಂದರೆ ಅವರ ಪಾದಗಳು ಊದಿಕೊಳ್ಳುತ್ತಿದ್ದವು. 'ನೀವೇಕೆ ಇಷ್ಟೊಂದು ಬಿಕ್ಕಿ ಬಿಕ್ಕಿ ಅಳುತ್ತೀರಿ?' ಎಂದು ಸಹಾಬಿಯರು ಕೇಳಿದಾಗ ನಬಿ(ಸ) ಹೇಳಿದರು: 'ನಾನು ನನ್ನ ಪ್ರಭುವಿನ ಕೃತಜ್ಞ ದಾಸನಾಗಬಾರದೇ?'

(ಹುಝೂರ್ ಹೇಳಿದರು:) ಹಝ್ರತ್ ಪೈಗಂಬರ್(ಸ)ರ ಈ ಸ್ಥಿತಿಯು, ನಾವು ಅಲ್ಲಾಹನ ಅನುಗ್ರಹಗಳಿಗೆ ಕೃತಜ್ಞರಾಗಿರುತ್ತಾ ನಮ್ಮ ಕೃತಜ್ಞತೆಯನ್ನು ಪರಮಾವಧಿಗೆ ತಲುಪಿಸಬೇಕೆಂದು ನಮ್ಮಿಂದ ಆವಶ್ಯಪಡುತ್ತದೆ. ಕೃತಜ್ಞತೆ ಎಂದರೆ ಸುಮ್ಮನೆ ಕುಳಿತುಕೊಳ್ಳುವುದಲ್ಲ. ಕೃತಜ್ಞತೆಯು ಸತ್ಕರ್ಮಗಳಲ್ಲಿ ಮತ್ತಷ್ಟು ಪ್ರಗತಿಯನ್ನು ಆವಶ್ಯಪಡುತ್ತದೆ. ಹಝ್ರತ್ ಪೈಗಂಬರ್(ಸ) ತಖ್ವದ ಅತ್ಯುನ್ನತ ಮಟ್ಟದಲ್ಲಿದ್ದರು. ಆದ್ದರಿಂದ ನಬಿ(ಸ) ಅತ್ಯಂತ ಕೃತಜ್ಞ ದಾಸನಾಗುವ ಅತ್ಯುನ್ನತ ಗುಣಮಟ್ಟವನ್ನು ಪಡೆದುಕೊಂಡರು, ಅಲ್ಲಾಹನ ನೈಜ ದಾಸನಾಗುವ ಹಕ್ಕನ್ನು ಪೂರೈಸಬೇಕಾದರೆ 'ನೀವು ಸಹ ಕೃತಜ್ಞತೆ ತೋರಿಸುವ ದಾಸನಾಗಿರಿ' ಎಂದು ಅವರು ನಮ್ಮನ್ನು ಉಪದೇಶಿಸಿದರು. ಅಲ್ಲಾಹನು ತನ್ನ ಕೃಪೆಯನ್ನು ನಿಮ್ಮ ಮೇಲೆ ಸುರಿಸುವಾಗ ನೀವು ನಿಮ್ಮ ಆರಾಧನೆಗಳ ಮಟ್ಟವನ್ನು ಹೆಚ್ಚಿಸಿರಿ ಮತ್ತು ಕೃತಜ್ಞತೆ ಸಲ್ಲಿಸಿರಿ.

ದೇವನ ಅನುಗ್ರಹಗಳ ಪರಿಣಾಮವಾಗಿ ಸೋಮಾರಿತನ ಉಂಟಾಗಬಾರದು, ಬದಲಾಗಿ ಆರಾಧನೆಯ ಪರಿಣಾಮವಾಗಿ ಮುನ್ನಡೆಯುತ್ತಲೇ ಇರಬೇಕು.

ಹಝ್ರತ್ ಮುಸ್ಲಿಹ್ ಮೌಊದ್(ರ) ಒಂದು ಕಡೆ ಹೀಗೆ ಹೇಳಿದ್ದಾರೆ: 'ನಿನ್ನ ಅನುಗ್ರಹಗಳೇ ನನ್ನನ್ನು ಉದ್ಧಟನನ್ನಾಗಿ ಮಾಡಿದವು' ಎಂದು ಹೇಳಿದ ವ್ಯಕ್ತಿಯು ಮೂರ್ಖನಾಗಿದ್ದಾನೆ. ಅಂದರೆ ಅಲ್ಲಾಹನ ಅನುಗ್ರಹಗಳೇ ನನ್ನನ್ನು ಕೃತಜ್ಞನನ್ನಾಗಿ ಮಾಡುವ ಬದಲು ಉದ್ಧಟನನ್ನಾಗಿ ಮಾಡಿದವು ಎಂದು ಅವನು ಹೇಳುತ್ತಾನೆ. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: 'ದೇವನ ಅನುಗ್ರಹಗಳು ಯಾವತ್ತೂ ಮನುಷ್ಯನನ್ನು ಉದ್ಧಟನನ್ನಾಗಿ ಮಾಡುವುದಿಲ್ಲ, ಅವನು ಹೇಳುವುದು ತಪ್ಪು; ಅವು ದುಷ್ಟನನ್ನಾಗಿ ಮಾಡುವುದಿಲ್ಲ, ಬದಲಾಗಿ ಇನ್ನಷ್ಟು ಕೃತಜ್ಞನನ್ನಾಗಿ ಮತ್ತು ವಿಧೇಯನನ್ನಾಗಿ ಮಾಡುತ್ತವೆ. ಹಾಗಾಗಿ ನೀವು ಮೊದಲಿಗಿಂತಲೂ ಹೆಚ್ಚು ವಿಧೇಯರಾಗಿರಿ, ಏಕೆಂದರೆ 'ನಿಮಗೆ ಏನೇ ನೀಡಲಾದರೂ ಅದಕ್ಕೆ ನೀವು ಕೃತಜ್ಞತೆ ಸಲ್ಲಿಸಿದರೆ, ನಾನು ನಿಮಗೆ ಇನ್ನೂ ಹೆಚ್ಚಿನದನ್ನು ನೀಡುತ್ತೇನೆ' ಎಂದು ಅಲ್ಲಾಹನು ಹೇಳಿರುತ್ತಾನೆ.'

ಅಲ್ಲಾಹನು ನಮ್ಮನ್ನು ನೈಜ ಕೃತಜ್ಞರನ್ನಾಗಿ ಮಾಡಲಿ, ನೈಜ ಆರಾಧಕರನ್ನಾಗಿ ಮಾಡಲಿ, ನಾವು ಸದಾ ಅವನ ಅನುಗ್ರಹಗಳನ್ನು ಪಡೆದುಕೊಳ್ಳುವವರಾಗೋಣ. ಆಮೀನ್.

—————————*****—————————

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ

مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ

فَلَاهَادِىَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ

عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى

وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوااللّٰهَ

يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis***(atba)

At, ***'Masjid Mubarak',*** *Islamabad, Tilford,* U.K. On 07-08-2026

**Summarized by** *Majlis Ansarullah Bharat*

***Kannada Translation:*** Moulavi Inamullah for Kannada Desk, Qadian

***Reviewed by:*** M.P Ibrahim | ***Layout:*** Basheer K.P. Manjeshwar

***Published By:*** Kannada Isha'at Team for Nazarath Nashr-O-Isha'ath, Qadian

***Email:*** *khutuba.kannada@gmail.com*

**You can find all the Sermons archived at**: www.alislam.org/friday-sermon